# ಆಗ ರೆಕ್ಕೆಕಟ್ಟಿ ಹಾರುವ ಕನಸಿತ್ತು



**ಅರ್ಪಿತಾ ಉದಯದ 'ಆನಂದ ರಾಗ'ದ ಭಾವನಾ**

**◆ ಅಭಿನಯದ ಒಲವು ಮೂಡಿದ್ದು ಹೇಗೆ?**

'ಆನಂದ ರಾಗ' ನನ್ನ ಮೊದಲ ಧಾರಾವಾಹಿ. ಮೇಕಪ್ ಆರ್ಟಿಸ್ಟ್ ಆಗಿ ಕೆಲಸ ಮಾಡ್ತಾ ಇದ್ದೆ. ಅದೇ ಸಮಯದಲ್ಲಿ ನಟಿಸುವ ಯೋಚನೆ ಬಂತು. ಆಡಿಷನ್ ನೀಡಲು ಆರಂಭಿಸಿದೆ. ಇದರಲ್ಲಿ ಅವಕಾಶ ಸಿಕ್ಕಿದೆ ಮಾಡುತ್ತಿದ್ದೇನೆ. ಬಿಕಾಂ ಓದಿದ ನಂತರ ಮೇಕಪ್ ಬಗ್ಗೆ ಹೇಗೋ ಆಸಕ್ತಿ ಬಂತು. ಹಾಗಾಗಿ ಅದನ್ನು ಕಲಿಯುವ ಯತ್ನ ಮಾಡಿದೆ. ಎರಡು ವರ್ಷ ಅದೇ ಕೆಲಸ ಮಾಡಿದೆ. ಅಲ್ಲಿ ಕೆಲಸ ಮಾಡುತ್ತಿದ್ದ ಹಾಗೆಯೇ ನಟನೆಗೂ ಅವಕಾಶ ಸಿಕ್ಕಿದ್ದರಿಂದ ಆಸಕ್ತಿಯಿಂದ ತೊಡಗಿದ್ದೇನೆ. ಮುಂದೆ ಪ್ರಧಾನ ಪಾತ್ರವನ್ನು ಮಾಡಬೇಕು ಎನ್ನುವ ಆಸೆ ಇದೆ. ಪಾರಂಪರಿಕ ಕಥಾ ಹಂದರದಲ್ಲಿ ಕುಟುಂಬವನ್ನು ಪೋಷಿಸುವ ಪಾತ್ರ ನಿರ್ವಹಿಸುವ ಆಸೆ. ಪಾತ್ರಕ್ಕೆ ಮುಗ್ಧತೆ ಇರಬೇಕು. ಅದು ವೀಕ್ಷಕರಿಗೆ ಹತ್ತಿರ ಆಗಬೇಕು ಎಂದು ಅನ್ನಿಸುತ್ತದೆ.

**◆ ಮೇಕಪ್ ಕಲೆ ನಟನೆಗೆ ಎಷ್ಟು ಸಹಕಾರಿಯಾಗುತ್ತಿದೆ?**

ಮೇಕಪ್ ಕಲೆ ಮತ್ತು ಅಭಿನಯ ಕಲೆ ಎರಡೂ ಭಿನ್ನ. ಸಾಮ್ಯತೆ ಏನೆಂದರೆ, ಬೇರೆಯವರಿಗೆ ಮೇಕಪ್ ಮಾಡುತ್ತಿದ್ದವಳು ಸ್ವತಃ ಮೇಕಪ್ ಹಾಕಿಕೊಳ್ಳುತ್ತಿದ್ದೇನೆ. ಆದರೆ ನಟನೆಗೂ ಅದಕ್ಕೂ ಯಾವುದೇ ಸಂಬಂಧ ಇಲ್ಲ. ಅದರಿಂದ ಆಗುತ್ತಿರುವ ಸಹಾಯ ಏನೆಂದರೆ, ನನಗೆ ನಾನು ಹೇಗೆ ಮೇಕಪ್ ಮಾಡಿಕೊಳ್ಳಬೇಕು ಎನ್ನುವುದು ಗೊತ್ತಾಗುತ್ತದೆ. ಅಭಿನಯದ ಆರಂಭವೇ ಇಲ್ಲಿಂದ ಆಗಿದೆ ಎಂದರೂ ತಪ್ಪೇನೂ ಇಲ್ಲ. ಈಗ ನಟನೆಯನ್ನು ಕಲಿಯುತ್ತಿದ್ದೇನೆ. ಪ್ರತಿದಿನ ಹೊಸತನ್ನು ಕಲಿಯಲು ಇಲ್ಲಿ ಅವಕಾಶವಂತೂ ನನಗೆ ಸಿಗ್ತಾ ಇದೆ.

**◆ ಭಾವನಾ ಪಾತ್ರ ಹೇಗಿದೆ?**

ಮೂಗಿ ಪಾತ್ರ. ಇದರ ಬಗ್ಗೆ ಯಾವುದೇ ಐಡಿಯಾ ನನಗೆ ಇರಲಿಲ್ಲ. ಆರಂಭಕ್ಕೂ ಮುಂಚೆ ಹೇಗೆ ತಯಾರಿ ಮಾಡಿಕೊಳ್ಳಬೇಕು ಎಂದು ಹೇಳಿದ್ದರು. ಅದಕ್ಕಾಗಿ ಸ್ವಲ್ಪ ವಿಡಿಯೊಗಳನ್ನು ನೋಡಿ ತಯಾರಿಮಾಡಿಕೊಂಡೆ. ಪ್ರಾಯೋಗಿಕವಾಗಿ ಬಣ್ಣ ಹಚ್ಚಿದ ಮೇಲೆ ಕಲಿಕೆ ಆರಂಭ ಆಯಿತು ಎಂದೆನಿಸುತ್ತದೆ. ಇಲ್ಲಿ ತುಂಬ ಹೇಳಿಕೊಟ್ಟರು. ಅದು ನನ್ನ ಕಲಿಕೆಗೆ ಸಹಾಯ ಆಯಿತು. ಇದರಲ್ಲಿ ಭಾವನೆಗಳನ್ನು ಪ್ರಕಟಿಸುವುದಕ್ಕೆ ಹೆಚ್ಚಿನ ಮಹತ್ವ ಇದೆ. ತುಂಬ ಸವಾಲಿನ ಪಾತ್ರ. ಮೊದಲು ಸುಲಭ ಎಂದುಕೊಂಡಿದ್ದೆ. ಒಳ್ಳೆಯ ಪ್ರತಿಕ್ರಿಯೆ ಅಂತೂ ಸಿಗ್ತಾ ಇದೆ. ಧಾರಾವಾಹಿ ಆರಂಭವಾದ ಮೇಲೆ ಹೊರಗಡೆ ಸುತ್ತಿಲ್ಲ. ಸಾಮಾಜಿಕ ಮಾಧ್ಯಮಗಳನ್ನೂ ಬಳಸುವುದಿಲ್ಲ. ಕೆಲವೊಮ್ಮೆ ದೇವಸ್ಥಾನಕ್ಕೆ ಹೋಗುತ್ತೇನೆ. ಅಲ್ಲಿ ಕೆಲವರು ಗುರುತಿಸುತ್ತಾರೆ. ಅದು ನನಗೆ ಖುಷಿ ಕೊಡುತ್ತದೆ.

**◆ ಸಿನಿಮಾ ಹೆಸರು ಸೀರಿಯಲ್‌ಗೆ ಇಡ್ತಾರಲ್ಲ ಅದರ ವಿಶೇಷ ಏನಿರಬಹುದು?**

ಹೆಸರು ಹೇಳಿದ ತಕ್ಷಣ ಅದನ್ನು ಕೇಳಿದ ನೆನಪಾಗುತ್ತದೆ. ಆ ಸಿನಿಮಾ ಟೈಟಲ್ ಕೆಲವರಿಗೆ ಕಾಡಬಹುದು. ಅದು ಒಂದು ರೀತಿಯಲ್ಲಿ ಪರಿಚಯ ಇರುತ್ತದೆ. ಆಗಾಗ ಬಳಕೆ ಆಗಿದ್ದರಿಂದ ಕ್ಯಾಚಿ ಎಂದು ಅನ್ನಿಸುತ್ತದೆ. ಇದೆಲ್ಲ ಅರ್ಥಮಾಡಿಕೊಳ್ಳುವ ಅನುಭವ ಇಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ಜನಪ್ರಿಯವಾದ ಹೆಸರು ಉತ್ತಮ ಏಕೆಂದರೆ ವೀಕ್ಷಕರ ಗಮನವನ್ನು ಸೆಳೆಯುತ್ತದೆ ಎನ್ನುವ ನಂಬಿಕೆ ಕಾರಣ ಇರಬಹುದು.

**◆ ನಿಮಗೆ ಏನಾಗಬೇಕು ಎನ್ನುವ ಆಸೆ ಇತ್ತು?**

ಏನೂ ಆಸೆ, ಗುರಿ ಇರಲಿಲ್ಲ. ಬಾಲ್ಯದಲ್ಲಿ ಗಗನದಲ್ಲಿ ಹಾರುವ ವಿಮಾನ ಕಂಡು ಆದ ಬೆರಗು ನನ್ನಲ್ಲಿ ಪೈಲಟ್ ಆಗಬೇಕೆಂಬ ಕನಸನ್ನು ಹುಟ್ಟುಹಾಕಿತ್ತು. ಬೆಳೆಯುತ್ತಾ ಅದು ಯಾವುದೂ ಉಳಿಯಲಿಲ್ಲ. ಆ ವಿಷಯದಲ್ಲಿ ಪೋಷಕರ ಪಾತ್ರವೂ ಪ್ರಧಾನವಾಗುತ್ತದೆ. ಅವರು ವಾಣಿಜ್ಯ ವಿಷಯದಲ್ಲಿ ಓದುವಂತೆ ಹೇಳಿದರು. ಏಕೆಂದರೆ ನನ್ನ ಅಕ್ಕ ಬಿಕಾಂ ಮಾಡಿ ಒಳ್ಳೆಯ ಕೆಲಸದಲ್ಲಿ ಇದ್ದಳು. ನನಗೂ ಅಂತಹ ಅವಕಾಶಗಳು ಸಿಗುತ್ತವೆ ಎನ್ನುವುದು ಅವರ ಭಾವನೆ. ಬಿಕಾಂ ಮಾಡಿದ ನಂತರ ನನಗೆ ಏನು ಮಾಡಬೇಕು ಎಂದು ಗೊತ್ತಾಗಲಿಲ್ಲ. ಎಂಬಿಎ ಮಾಡಬೇಕು ಅಂದುಕೊಂಡಿದ್ದೆ. ಆದರೆ ಮೇಕಪ್ ಬಗ್ಗೆ ನನಗೆ ಆಕರ್ಷಣೆ ಇತ್ತು. ಪರೀಕ್ಷೆಯ ಫಲಿತಾಂಶ ಬರುವ ಮೊದಲೇ ಮೇಕಪ್ ಕಲಿತು ಕೆಲಸವನ್ನೂ ಆರಂಭಿಸಿದೆ.

**◆ ಪಾತ್ರಕ್ಕೆ ಆಯ್ಕೆ ಪ್ರಕ್ರಿಯೆ ಹೇಗಿತ್ತು?**

ಆಡಿಷನ್ ನೀಡಿದಾಗ ಆಯ್ಕೆ ಆಗುವ ಭರವಸೆ ಇರಲಿಲ್ಲ. ಇದಕ್ಕೂ ಮೊದಲು ಆಡಿಷನ್ ಕೊಟ್ಟಿದ್ದೆ. ಡೈಲಾಗ್ ಹೇಗೆ ಹೇಳಬೇಕು ಎನ್ನುವುದು ಗೊತ್ತಿರಲಿಲ್ಲ. 'ಆನಂದ ರಾಗ'ಕ್ಕೆ ಆಡಿಷನ್ ಕೊಟ್ಟಾಗ ಹೇಳಿಕೊಟ್ಟಂತೆ ಮಾಡಿದೆ. ಆಗ ನನಗೆ ಸ್ಪಷ್ಟವಾಗಿದ್ದು ಏನೆಂದರೆ, ಆಯ್ಕೆ ಆಗುವುದಿಲ್ಲ. ಎಂದು ಆದರೆ ಒಂದು ವಾರದ ನಂತರ ನನಗೆ ಕಾಲ್ ಮಾಡಿ ಬೇರೆ ಆಡಿಷನ್ ಏನಾದರೂ ಕೊಟ್ಟಿದ್ದೀರಾ ಆಯ್ಕೆ ಏನಾದರೂ ಆಯ್ತಾ ಎಂದು ವಿಚಾರಿಸಿದರು. ಒಂದು ತಿಂಗಳಾದ ನಂತರ ಆಯ್ಕೆ ಆಗಿದ್ದು ಖಚಿತ ಮಾಡಿದರು. ಸಿಕ್ಕ ಅವಕಾಶವನ್ನು ಒಪ್ಪಿ ಮನೆಯಲ್ಲಿ ಬೆಂಬಲಿಸಿದರು. ಎಲ್ಲರಿಗೂ ಖುಷಿ ಆಯಿತು.

■ **ರಾಘವೇಂದ್ರ ಕೆ.**